# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1184 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 0703/2022 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಆರೋಗ್ಯ & ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಜಿಲ್ಲೆಯಲ್ಲಿ 2013ರಲ್ಲಿ ಪ್ರಾರಂಭವಾದ ಬ್ರಿಮ್ಸ್ ಮಹಾವಿದ್ಯಾಲಯ ಆಸ್ಪತ್ರೆಯಲ್ಲಿ ಅಗ್ನಿಶಾಮಕ (Fire) ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬ್ರಿಮ್ಸ್ ಬೀದರನ ಅಡಿಯಲ್ಲಿ ಇರುವ ಬ್ರಿಮ್ಸ್ ಬೋಧಕ ಆಸ್ಪತ್ರೆಯ ಸಾಮರ್ಥ್ಯವನ್ನು 300 ರಿಂದ 750 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೇಗೇರಿಸಲು 450 ಹಾಸಿಗೆಗಳ ಬೋಧಕ ಆಸ್ಪತ್ರೆಯನ್ನು KTPP ನಿಯಮಗಳನ್ವಯ ಲೋಕೋಪಯೋಗಿ ಇಲಾಖೆ, ಬೀದರ್ ರವರ ಮುಖಾಂತರ ಕೈಗೊಳ್ಳಲಾಗಿರುತ್ತದೆ.<br><br>ಸದರಿ ಕಟ್ಟಡದಲ್ಲಿ ಸಂಸ್ಥೆಯ ಪತ್ರ ಸಂಖ್ಯೆ:ಸಿಆರ್-09 ದಿನಾಂಕ:05.11.2016ರಂತೆ, ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಲೋಕೋಪಯೋಗಿ ಇಲಾಖೆಯಿಂದ ಸಂಖ್ಯೆ: C.E.C & B (North East) Kalaburagi Reg. No.55/Feb. 2017 Dated:16.02.2017ರಂತೆ, ತಾಂತ್ರಿಕ ಅನುಮೋದನೆ ನೀಡಿ, ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರನಲ್ಲಿ ಅಂತಿಮಗೊಳಿಸಲಾದ ಗುತ್ತಿಗೆದಾರರಿಗೆ ಸಂಖ್ಯೆ:PWD/BDR/JE-2/2017-18/1373 ದಿನಾಂಕ:17.07.2017ರಂದು ಕಾರ್ಯಾದೇಶ ನೀಡಲಾಗಿದ್ದು, ಸದರಿ ಕಾಮಗಾರಿಯನ್ನು ಮೂರು ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಿ, ಹಸ್ತಾಂತರಗೊಳಿಸುವ ಷರತ್ತಿಗೊಳಪಟ್ಟು ಒಪ್ಪಂದ ಮತ್ತು ಕಾರ್ಯಾದೇಶ ನೀಡಲಾಗಿರುತ್ತದೆ. ಅಂತಿಮಗೊಳಿಸಲಾದ ಗುತ್ತಿಗೆದಾರರಿಂದ ಕಾಮಗಾರಿ ಕೈಗೊಳ್ಳಲಾಗಿದ್ದು, ಸದರಿಯವರು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ವಿಭಾಗದಿಂದ ಸದರಿ ಕಾಮಗಾರಿಯ NOC ಪಡೆದು ಹಸ್ತಾಂತರಿಸಬೇಕಾಗಿರುವ ಷರತ್ತು ಟೆಂಡರ್ ಅಧಿಸೂಚನೆಯಲ್ಲಿ ನಮೂದಿಸಲಾಗಿರುತ್ತದೆ. ಆದರೆ 450 ಹಾಸಿಗೆಗಳ ಆಸ್ಪತ್ರೆಯ ಕಟ್ಟಡ ಕಾಮಗಾರಿ ಪ್ರಾರಂಭದಲ್ಲಿ ಅಗ್ನಿಶಾಮಕ ಸೇವೆಗಳಿಗಾಗಿ Pre-NOC ಪಡೆಯಬೇಕಾಗಿದ್ದು, ನಮೂದಿತ ಬೋಧಕ ಆಸ್ಪತ್ರೆಯ ಕಟ್ಟಡದ ಸಿವಿಲ್ ಕಾಮಗಾರಿ ಪ್ರಾರಂಭಗೊಳಿಸುವ ಮೊದಲು ಇದನ್ನು ಪಡೆಯಲಾಗಿರುವುದಿಲ್ಲ.<br><br>ಆದ್ದರಿಂದ ಸದರಿ ಇಲಾಖೆಯಿಂದ ಗುತ್ತಿಗೆ ದಾರರಿಂದ NOC ಪಡೆದು ಕಾರ್ಯಗತಗೊಳಿಸಿ, ಇಂದಿನವರೆಗೆ ಹಸ್ತಾಂತರಗೊಂಡಿರುವುದಿಲ್ಲ. |

| | | |
|---|---|---|
| (ಆ) | ಹಾಗಿದ್ದಲ್ಲಿ, ಆಕಸ್ಮಾತ್ ಅಗ್ನಿ ಅವಘಡ ಜರುಗಿದ್ದರೆ ಸಾವಿರಾರು ಸಂಖ್ಯೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಡ ರೋಗಿಗಳ ಪಾಡೇನು ಎಂಬುದರ ಬಗ್ಗೆ ಸರ್ಕಾರ ಏನು ಯೋಜನೆ ಮಾಡಿದೆ; | ಚಾಲ್ತಿ ಸರ್ಕಾರಿ ಆದೇಶಗಳನ್ವಯ ವಿಧಿಸಲಾಗಿರುವ ರೂ.1.34ಕೋಟಿಗಳ ದಂಡ ಶುಲ್ಕವನ್ನು ಸಂದಾಯಕರಿಸಿ, NOC ಪಡೆಯಬೇಕಾಗಿರುವುದರಿಂದ, ನಮೂದಿತ ಕಟ್ಟಡವು ಸಾರ್ವಜನಿಕ ಆಸ್ಪತ್ರೆಯಾಗಿರುವುದರಿಂದ ದಂಡ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲು ಕೋರಲಾಗಿರುತ್ತದೆ. ಹಾಗೂ ಒಳಾಡಳಿತ ಇಲಾಖೆಗೆ (ಪಿ.ಸಿ.ಎ.ಎಸ್) ದಂಡ ಶುಲ್ಕ ವಿನಾಯಿತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಸಂಬಂಧ ಅಗ್ನಿಶಾಮಕ ಸೇವೆಗಳ ಇಲಾಖೆಯಿಂದ ದಂಡ ಶುಲ್ಕ ವಿನಾಯಿತಿ ಪಡೆದು, ಇಲ್ಲವಾದಲ್ಲಿ ಸರ್ಕಾರದ ಅನುಮೋದನೆಯೊಂದಿಗೆ ದಂಡ ಶುಲ್ಕ ಪಾವತಿಸಿ NOC ಪಡೆಯುವ ಕಾರ್ಯ ಪ್ರಗತಿಯಲ್ಲಿರುತ್ತದೆ. |
| (ಇ) | ಆಸ್ಪತ್ರೆ ಪ್ರಾರಂಭವಾಗುವ ಮೊದಲೇ ಅಗ್ನಿಶಾಮಕ ಅಳವಡಿಸಿದ ಬಗ್ಗೆ (No Objection Certificate) ಎನ್.ಒ.ಸಿ. (ಆಕ್ಷೇಪಣೆ) ಪಡೆಯಬೇಕಾಗಿದ್ದು; ಪಡೆಯದೇ ಇರಲು ಯಾರು ಹೊಣೆಗಾರರು; | ಅಗ್ನಿಶಾಮಕ ಅಳವಡಿಸಿದ ಬಗ್ಗೆ ಎನ್ ಓ ಸಿ (ಆಕ್ಷೇಪಣೆ) ಪಡೆಯಬೇಕಾಗಿದ್ದು, ಈ ಸಂಬಂಧ ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ದಿನಾಂಕ:13.01.2022ರಂದು ಅಗ್ನಿಶಾಮಕ ಸೇವೆಗಳ ಇಲಾಖೆ & ಲೋಕೋಪಯೋಗಿ ಇಲಾಖೆ, ಬೀದರ್ ರವರುಗಳ ಜಂಟಿ ಸಭೆ ಕರೆಯಲಾಗಿದ್ದು, ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದಂತೆ ಲೋಕೋಪಯೋಗಿ ಇಲಾಖೆಯಿಂದ ವಿವರವಾದ ತಾಂತ್ರಿಕ ವರದಿಯನ್ನು ನಿರೀಕ್ಷಿಸಲಾಗಿರುತ್ತದೆ. |
| (ಈ) | ಈಗಲಾದರು, ಅಗ್ನಿ ಶಾಮಕ ಅಳವಡಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ, ಕೈಗೊಳ್ಳುವುದಾದರೆ ಯಾವ ಕಾಲಮಿತಿಯಲ್ಲಿ ಕೈಗೊಳ್ಳಲಾಗುವುದು? | ಲೋಕೋಪಯೋಗಿ ಇಲಾಖೆಯ ತಾಂತ್ರಿಕ ವರದಿಯನ್ನಾಧರಿಸಿ ಆದ್ಯತೆ ಮೇರೆಗೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಸಮನ್ವಯದೊಂದಿಗೆ, ನಿಯಮಾನುಸಾರ ಕ್ರಮ ಕೈಗೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |

**ಕಡತ ಸಂ: ಎಂಇಡಿ 100 ಎಂ ಎಸ್ ಎಫ್ 2022**

(ಡಾ|| ಕೆ. ಸುಧಾಕರ್)
**ಆರೋಗ್ಯ & ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು.**